ರೀತಿ ಪೋಲೀಸ್ ಇಲಾಖೆಯವರು ಸರಿಯಾಗಿ ಕಂಪ್ಲೈಂಟ್ ಅನ್ನು ಎಂಟರ್‌ಟೇನ್ ಮಾಡುತ್ತಾ ಇಲ್ಲ. ಏಕೆಂದರೆ the Police Department is not entertaining complaints. They want to help the Cong(I) Leader. ಎಕ್ಸೈಜ್ ಆಫೀಸರ್ಸ್ ಮೇಲೆ ದಾಳಿ ಬರಬಹುದು ಎಂಬ ಸಂಶಯ ನನಗೆ ಇದೆ. ಅದರ ಸಲುವಾಗಿ ಸಪರೇಟ್ ಆಗಿ ಇದರ ಬಗ್ಗೆ ಸೀನಿಯರ್ ಆಫೀಸರ್ಸ್‌ರವರಿಂದ ಎನ್‌ಕ್ವೈರಿ ಮಾಡಿಸುತ್ತೀರಾ? ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಿ.

ಶ್ರೀ ಧರ್ಮಸಿಂಗ್:– ತಮ್ಮ ಕಾಲ್ ಅಟೆನ್‌ಷನ್ ಬಂದ ಮೇಲೆ Personally I had a talk with the S.P. Our Chief Minister has also directed. We don't spare anybody. ಕಾಂಪೆನ್‌ಸೇಷನ್ ಬಗ್ಗೆ ಹೇಳಿದ್ದೀರಿ. ಎಲ್ಲೆಲ್ಲಿ ಈ ತರಹ ಕಾಂಪನ್‌ಸೇಷನ್ ಕೊಡತಕ್ಕದ್ದು ಇದೆ ಅದನ್ನು ಕೊಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:– ಪ್ರೆಸ್‌ನವರಿಗೂ ಬೆದರಿಕೆ ಹಾಕಿದ್ದಾರೆ. ಅವರಿಗೂ ಸಹ ಪ್ರೊಟೆಕ್ಷನ್ ಕೊಡುವುದಕ್ಕೆ ಹೋಗಬೇಕು.

ಶ್ರೀ ಧರ್ಮಸಿಂಗ್ :– ಪ್ರೆಸ್‌ನವರಿಗಾಗಲಿ, ಬೇರೆ ಯಾರಿಗೇ ಆಗಲಿ, ಈ ರೀತಿ ವದಂತಿ ಮಾಡುತ್ತಾರೆ ಅಷ್ಟೇ ಯಾರಿಗೂ ಕೂಡ ಏನೂ ಆಗುವುದಿಲ್ಲ. We will take care of that.

Sri. S.H. KOUJALGI: After this incident, whether the Excise Officers have been transferred from this place? ಎಕ್ಸೈಜ್ ಅಧಿಕಾರಿಗಳನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದ ನಂತರ ತಮ್ಮನ್ನೂ ಕೂಡ ವರ್ಗ ಮಾಡುತ್ತಾರೆ ಎಂದು ಅಲ್ಲಿದ್ದಂಥ ಪೋಲೀಸ್ ಅಧಿಕಾರಿಗಳು ತಿಳಿದು ವಸಂತನನ್ನು ಹಿಡಿಯುವುದಕ್ಕೆ ಅವರು ಪ್ರಯತ್ನ ಮಾಡುತ್ತಾ ಇಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ? ಇವೊತ್ತು ಎಕ್ಸೈಜ್ ಆಫೀಸರ್ಸ್‌ನ್ನು ತಾವುಗಳು ಟ್ರಾನ್ಸ್‌ಫರ್ ಮಾಡಿದ್ದೀರಿ. ಹೀಗೆ ಟ್ರಾನ್ಸ್‌ಫರ್ ಮಾಡಿದ ನಂತರ ತಮ್ಮನ್ನು ಕೂಡ ರೆಗ್ಯುಲರ್ ಪೋಲೀಸ್‌ನಲ್ಲಿದ್ದವರನ್ನು ಸಿಓಡಿಗೆ ಹಾಕುತ್ತಾರೆ ಎಂಬ ಭಯದಿಂದ ಅವರು ವಸಂತನ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಈ ವಸಂತನು ಮೊದಲಿಂದಲೂ ವೀರಪ್ಪನ್ ರೀತಿಯಲ್ಲಿ ಫೆನ್ನಿ ವ್ಯಾಪಾರ ಮಾಡಿಕೊಂಡು ಬಂದಿದ್ದಾನೆ. ಇಂಥ ಮನುಷ್ಯನನ್ನು ಏತಕ್ಕಾಗಿ ಹಿಡಿದಿಲ್ಲ? ಅದರ ಸಲುವಾಗಿ ಎಕ್ಸೈಜ್ ಆಫೀಸರ್‌ನ್ನು ವರ್ಗ ಮಾಡಿದ್ದು ನಿಜವೆ? ಅದಕ್ಕೆ ಕಾರಣ ಏನು?

ಶ್ರೀ ಧರ್ಮಸಿಂಗ್:– ಎಕ್ಸೈಜ್ ಆಫೀಸರ್ಸ್ ಯಾರನ್ನೂ ಟ್ರಾನ್ಸ್‌ಫರ್ ಮಾಡಿಲ್ಲ. ಹಾಗೆ ಟ್ರಾನ್ಸ್‌ಫರ್ ಮಾಡತಕ್ಕಂಥಾದ್ದು ಸರಕಾರದ ವಿಚಾರವೂ ಇಲ್ಲ. ಯಾವ ಪೋಲೀಸ್ ಅಧಿಕಾರಿಗಳೂ ಕೂಡ ಏನಾದರೂ ತೊಂದರೆಯಾದೀತು ಎಂದು ಯಾರಿಗಾದರೂ ಪ್ರೊಟೆಕ್ಷನ್ ಕೊಡುವುದಕ್ಕೆ ತಯಾರಾಗಿಲ್ಲ. ಮತ್ತು ಹಾಗೆ ಮಾಡಿಲ್ಲ. ಈ ಫೆನ್ನಿ ತಯಾರಿಕಾ ಕಳ್ಳಸಾಗಾಣಿಕೆದಾರರು ಬಹಳ ವರ್ಷಗಳಿಂದ ಇದನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಯಾವ ಸರಕಾರವೂ ಇದರ ಬಗ್ಗೆ ಸಕಾಲಿಕ ಕ್ರಮ ತೆಗೆದುಕೊಂಡಿಲ್ಲ. ಆದರೆ ನಮ್ಮ ಸರಕಾರ ಕ್ರಮ ತೆಗೆದುಕೊಂಡಿದೆ. ನಾವು ಅದನ್ನು ನಿಲ್ಲಿಸುತ್ತೇವೆ.

ನಿಯಮ 334ರ ಮೇರೆಗೆ

(1) ಪ.ಜಾ/ಪ.ವರ್ಗದವರ ಶಿಕ್ಷಣ ಸಂಸ್ಥೆಗಳಿಗೆ ಜಿಲ್ಲಾ ಪರಿಷತ್‌ನವರಿಂದ ಸಹಾಯ ಧನ ದೊರೆಯದಿರುವುದು.

Sri MANOHAR INAPUR:- As per the Government Order, Sch.Caste and Sch.Tribe educational institutions are entitled for salary grant and other grants

from the date of starting of such institutions. Since Zilla parishads have come into existence, this Goverment order has been neglected and no body is following. That measures the Government will take in this aspect?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):– ಪ್ರಾಥಮಿಕ ಶಾಲೆಗಳ ಅನುದಾನ ಸಂಹಿತೆಯ ನಿಯಮ 22ರ ಪ್ರಕಾರ ಯಾವುದೇ ಶಿಕ್ಷಣ ಸಂಸ್ಥೆಗೆ, ಶಾಲೆಯು ಪ್ರಾರಂಭಿಸಿದ 7ವರ್ಷಕ್ಕೆ ಮೊದಲು ಅನುದಾನಕ್ಕೆ ಒಳಪಡಿಸುವಂತಿಲ್ಲ. ಆದರೆ, ಸರ್ಕಾರ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಶಾಲೆಗಳ ಪ್ರಾರಂಭಿಕ ವರ್ಷದಿಂದಲೇ ಅನುದಾನಕ್ಕೆ ಒಳಪಡಿಸಬಹುದು. ಇಂತಹ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳವರಿಂದ ನಡೆಸಲ್ಪಡುತ್ತಿರುವ ಶಾಲೆಗಳೂ ಬರುತ್ತದೆ. ಸದರಿ ನಿಯಮಗಳ ಪ್ರಕಾರ ನಿರ್ದಿಷ್ಟ ಷರತ್ತುಗಳನ್ನು ಪೂರೈಸಿದಂತಹ ಸಂದರ್ಭಗಳಲ್ಲಿ ಅಂತಹ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರ ಶಾಲೆಗಳಿಗೆ ಸರ್ಕಾರವು ಪ್ರಾರಂಭಿಕ ವರ್ಷದಿಂದ ಅನುದಾನಕ್ಕೆ ಒಳಪಡಿಸಬಹುದಿರುತ್ತದೆ. ಈ ಅಧಿಕಾರವು ಸರ್ಕಾರದಲ್ಲೇ ಕೇಂದ್ರೀಕೃತವಾಗಿದ್ದರೂ, ಜಿಲ್ಲಾ ಪರಿಷತ್ತುಗಳು ಅಧಿಕಾರಕ್ಕೆ ಬಂದ ನಂತರ ಇಂತಹ ಪ್ರಕರಣಗಳು ಸರ್ಕಾರಕ್ಕೆ ಬರುತ್ತಿರುವುದು ವಿರಳವಾಗಿರುತ್ತದೆ. ಸರ್ಕಾರವು, ಜಿಲ್ಲಾ ಪರಿಷತ್ತೇ ಈ ಅಧಿಕಾರವನ್ನು ಚಲಾಯಿಸುತ್ತಿರಬಹುದೆಂಬ ಭಾವನೆಯಿಂದ ಕಾನೂನಿನ ಪರಿಸ್ಥಿತಿಯನ್ನು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ಸುತ್ತೋಲೆ ಮೂಲಕ ತಿಳಿಸಿರುತ್ತೆ. ಯಾವುದೇ ಜಿಲ್ಲಾ ಪರಿಷತ್ತು ಇಂತಹ ಪ್ರಕರಣಗಳನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಸರ್ಕಾರವು ಕಾನೂನಿನನ್ವಯ ಸೂಕ್ತ ಪರಿಶೀಲನೆ ಮಾಡಿ ಸಂಸ್ಥೆಯ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಸೂಕ್ತ ಆದೇಶ ಹೊರಡಿಸಲು ಕ್ರಮಕೈಗೊಳ್ಳುವುದು. ಮಾನ್ಯ ಸದಸ್ಯರು ಹೇಳಿರುವಂತಹ ಯಾವುದೇ ಸಮಸ್ಯೆಯೂ ಸರ್ಕಾರದ ಗಮನಕ್ಕೆ ಈವರೆಗೆ ಬಂದಿರುವುದಿಲ್ಲ. ನಿರ್ದಿಷ್ಟ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

(2) ಶಿರಾ ತಾಲ್ಲೂಕಿನಲ್ಲಿ ರೇಷ್ಮೆ ಸಹಾಯಕರಿಂದ ಹುಳುಗಳನ್ನು ಪಡೆದು ಸಾಕಿ ಹಾನಿಗೊಳಗಾದ ರೈತರಿಗೆ ಪರಿಹಾರ

ಶ್ರೀ ಡಿ. ಬಿ. ಚಂದ್ರೇಗೌಡ:– ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ರಾಯಪುರದ ಸರಕಾರಿ ಗ್ರೇನೇಜ್‌ನಿಂದ ಕಳುಹಿಸಿದಂಥ ಸುಮಾರು 2014 ಮಿಶ್ರತಳಿ ರೇಷ್ಮೆ ಮೊಟ್ಟೆಗಳನ್ನು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಕೊಟ್ಟಿದ್ದಾರೆ. ಆದರೆ ಮೊಟ್ಟೆಗಳ ಗೂಡು ಕಟ್ಟಿದ್ದು ಸಾಯುತ್ತಾ ಇದ್ದಾವೆ. ಅಲ್ಲಿರತಕ್ಕಂಥ ರೇಷ್ಮೆ ಇಲಾಖಾ ನೌಕರರನ್ನು ಕೇಳಿದರೆ ಎರಡು ಜಾತಿಯ ಹುಳುಗಳು ಮಿಶ್ರವಾಗಿ ಹುಟ್ಟಿದ್ದಾವೆ, ಆದುದರಿಂದ ಅವುಗಳು ಸಾಯುತ್ತಾ ಇವೆ ಎಂದು ಕಾರಣಗಳನ್ನು ಕೊಡುತ್ತಾರೆ. ಸರಕಾರಿ ಮಟ್ಟದಿಂದಲೇ, ಸರಕಾರಕ್ಕೆ ಸಂಬಂಧಪಟ್ಟಂಥ ಇಲಾಖೆಯಿಂದಲೇ ಒದಗಿಸಿದ ಈ ಮೊಟ್ಟೆಗಳು ಶಿರಾ ತಾಲ್ಲೂಕಿನಲ್ಲಿ 7–8 ಜನರಿಗೆ ಒದಗಿಸಿರುವುದರಿಂದ ಅವರಿಗೆ ಏನು ಹಾನಿ ಮತ್ತು ತೊಂದರೆಗಳು ಆಗಿವೆ ಅದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದರೆ ಸರಕಾರ ಒದಗಿಸಿರತಕ್ಕಂಥ ಮೊಟ್ಟೆಗಳಿಂದ ಆಗಿರತಕ್ಕಂಥ ಅನ್ಯಾಯದಿಂದ ರೈತರಿಗೆ ಏನು ತೊಂದರೆ ಉಂಟಾಯಿತು ಅವರಿಗೆ ಪರಿಹಾರವನ್ನು ಕೊಡತಕ್ಕಂಥ ಪ್ರಯತ್ನವನ್ನು ಸರಕಾರ ಮಾಡುತ್ತದೆಯೇ?

ಶ್ರೀ ವಿ. ಮುನಿಯಪ್ಪ:– "ಶಿರಾ ರೇಷ್ಮೆ ಸಹಾಯಕರಿಂದ ಪಡೆದ ರೇಷ್ಮೆ ಹುಳುಗಳನ್ನು ಸಾಕಿದ ಹುಳುಗಳು ಸಾಯುತ್ತಿರುವ ಬಗ್ಗೆ ಹಾನಿಗೊಳಗಾದ ರೈತರಿಗೆ ತಕ್ಕ ಪರಿಹಾರ ನೀಡುವ ಬಗ್ಗೆ ಮಾನ್ಯ ರೇಷ್ಮೆ ಸಚಿವರ ಗಮನಕ್ಕೆ ತರಬಯಸುತ್ತೇನೆ.